ಬೆಳಗಾವಿ ಜಿಲ್ಲೆಯಲ್ಲಿ ಬರ ಕಾಮಗಾರಿ ಯೋಜನೆಯಡಿಯಲ್ಲಿ ಕೊಳವೆ ಬಾವಿಗಳು

4486(4818) : ಶ್ರೀ ಅಪ್ಪಯ್ಯಗೌಡ ಬಸಗೌಡ ಪಾಟೀಲ್ (ಸಂಕೇಶ್ವರ್) : ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬರ ಕಾಮಗಾರಿ ಯೋಜನೆಯಡಿಯಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಕೊಳವೆ ಬಾವಿಗಳನ್ನು ಮಂಜೂರು ಮಾಡಲಾಗಿದೆ;

ಆ) ಇದಕ್ಕೆ, ಎಷ್ಟು ಹಣ ಖರ್ಚು ಮಾಡಲಾಗಿದೆ;

ಇ) ಈ ಯೋಜನೆಯಡಿಯಲ್ಲಿ ಎಷ್ಟು ಕೊಳವೆ ಬಾವಿಗಳನ್ನು ದುರಸ್ತಿ ಪಡಿಸಲಾಗಿದೆ ಹಾಗೂ ಎಷ್ಟು ಹಣ ಖರ್ಚುಮಾಡಲಾಗಿದೆ?

ಶ್ರೀ ಕೆ.ಬಿ. ಕೋಳಿವಾಡ್ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು)

ಅ) ಬರಪರಿಹಾರ ಅನುದಾನದಡಿ ಹೊಸ ಕೊಳವೆ ಬಾವಿಗಳನ್ನು ಕೊರೆಯಲು ಅವಕಾಶವಿರುವುದಿಲ್ಲ. ಆದುದರಿಂದ, ಕುಡಿಯುವ ನೀರಿನ ತೊಂದರೆ ನಿವಾರಿಸಲು ಬೆಳಗಾಂ ಜಿಲ್ಲೆಯಲ್ಲಿ ರಾಜ್ಯ ವಲಯದಡಿ 218 ಕೊಳವೆ ಬಾವಿಗಳನ್ನು ಮಂಜೂರು ಮಾಡಲಾಗಿದೆ.

ಆ) ಜೂನ್–2003ರ ಅಂತ್ಯಕ್ಕೆ 193 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ ಮತ್ತು ರೂ. 23.08 ಲಕ್ಷ ವೆಚ್ಚವಾಗಿರುತ್ತದೆ.

ಇ) 2003–04 ರ ಸಾಲಿನ ಸಾಮಾನ್ಯ ಕಾರ್ಯಕ್ರಮದಡಿ 3646 ಕೊಳವೆ ಬಾವಿಗಳನ್ನು ದುರಸ್ತಿ ಮಾಡಲಾಗಿದೆ. ಮತ್ತು ಜೂನ್–2003ರ ಅಂತ್ಯಕ್ಕೆ ರೂ. 13.72 ಲಕ್ಷ ವೆಚ್ಚವಾಗಿರುತ್ತದೆ.

ಬೆಳಗಾವಿ ಜಿಲ್ಲೆಗೆ ಮಂಜೂರಾದ ಶಾಲಾ ಕೊಠಡಿಗಳು

4487 (4319) : ಶ್ರೀ ಅಪ್ಪಯ್ಯಗೌಡ ಬಸಗೌಡ ಪಾಟೀಲ್ (ಸಂಕೇಶ್ವರ್) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಗೆ 4 ವರ್ಷಗಳಲ್ಲಿ ವಿವಿಧ ಯೋಜನೆಯಡಿಯಲ್ಲಿ ಮಂಜೂರಾದ ಶಾಲಾ ಕೋಣೆಗಳೆಷ್ಟು;

ಆ) ಅದರಲ್ಲಿ ಪೂರ್ಣವಾದ ಹಾಗೂ ಅಪೂರ್ಣವಾದ ಕೋಣೆಗಳೆಷ್ಟು?

ಇ) ಕಳಪೆ ಗುಣಮಟ್ಟದಿಂದ ಕಟ್ಟಿದ ಶಾಲಾ ಕೋಣೆಗಳು ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ ಇದಕ್ಕೆ ಯಾರು ಹೊಣೆಗಾರರು? ಅಂತಹವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ? (ವಿವರ ನೀಡುವುದು)

ಪ್ರೊ. ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಬೆಳಗಾವಿ ಜಿಲ್ಲೆಗೆ 4 ವರ್ಷಗಳಲ್ಲಿ ವಿವಿಧ ಯೋಜನೆಯಡಿಯಲ್ಲಿ ಮಂಜೂರಾದ ಶಾಲಾ ಕೋಣೆಗಳು 997.

ಆ) ಪೂರ್ಣವಾದ ಕೋಣೆಗಳು : 924

ಅಪೂರ್ಣವಾದ ಕೋಣೆಗಳು :73

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಹೊಸನಗರ ಸರ್ಕಾರಿ ಕಾಲೇಜಿನಲ್ಲಿ ಕಂಪ್ಯೂಟರ್ ವಿಷಯಕ್ಕೆ ಪಡೆಯುತ್ತಿರುವ ಶುಲ್ಕ

4489 (5284) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹೊಸನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬಿ.ಕಾಂ ಪದವಿಯಲ್ಲಿ ಕಂಪ್ಯೂಟರ್ ವಿಷಯ ಯಾವಾಗಿನಿಂದ ಸೇರಿಸಲಾಗಿದೆ;

ಆ) ಈ ವಿಷಯಕ್ಕೆ ಸರ್ಕಾರದಿಂದ ನಿಗಧಿಪಡಿಸಿರುವ ಶುಲ್ಕ ಎಷ್ಟು; ಕಾಲೇಜಿನಲ್ಲಿ ವಸೂಲಿ ಮಾಡುತ್ತಿರುವ ಶುಲ್ಕ ಎಷ್ಟು;

ಇ) ನಿಗಧಿತ ಹೆಚ್ಚುವರಿ ಶುಲ್ಕ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಬಂದಿದ್ದಲ್ಲಿ ಸರ್ಕಾರ ಸಂಬಂಧಪಟ್ಟವರ ಮೇಲೆ ಏನು ಕ್ರಮ ತೆಗೆದುಕೊಂಡಿದೆ;

ಈ) ಹಿಂದುಳಿದ ಬಡ ವಿದ್ಯಾರ್ಥಿಗಳಿಗೆ ಶುಲ್ಕದಲ್ಲಿ ವಿಶೇಷ ರಿಯಾಯಿತಿ ನೀಡಲಾಗುವುದೆ?

ಡಾ: ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು)

ಅ) 2002–2003ನೇ ಸಾಲಿನಿಂದ ಹೊಸ ನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬಿ.ಕಾಂ ತೃತೀಯ ಪದವಿ ತರಗತಿಯಲ್ಲಿ ಕಂಪ್ಯೂಟರ್ ವಿಷಯವನ್ನು ಸೇರಿಸಲಾಗಿದೆ.

ಆ) ಸರ್ಕಾರ ನಿಗಧಿಪಡಿಸಿದ ಬಳಕೆ ಶುಲ್ಕ = 2000 ರೂ.

ಇ) ಇಲ್ಲ; ಉದ್ಭವಿಸುವುದಿಲ್ಲ.

ಈ) ಹೌದು, ಆದರೆ ಬಳಕೆ ಶುಲ್ಕದಲ್ಲಿ ಯಾವುದೇ ರಿಯಾಯಿತಿ ನೀಡಲಾಗುವುದಿಲ್ಲ.

ಕೇಂದ್ರ ಸರ್ಕಾರದ ಸರ್ವಶಿಕ್ಷಣ ಅಭಿಯಾನ ಯೋಜನೆಯ ಪ್ರಗತಿ

4490 (5286) : ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೇಂದ್ರ ಸರ್ಕಾರದ ಸರ್ವ ಶಿಕ್ಷಣ ಅಭಿಯಾನ ಯೋಜನೆಯನ್ನು ಯಾವಾಗ ಆರಂಭಗೊಳಿಸಲಾಯಿತು; ಆರಂಭದಿಂದ ಪ್ರತಿ ಸಾಲಿನಲ್ಲಿ ಬಂದ ಅನುದಾನದ ಮೊತ್ತವೆಷ್ಟು?

ಆ) ರಾಜ್ಯ ಸರ್ಕಾರ ಈ ಯೋಜನೆಗೆ ಬಿಡುಗಡೆ ಮಾಡಿದ ಹಣ ಎಷ್ಟು; (ವರ್ಷವಾರು ವಿವರ ಆರಂಭದಿಂದ ನೀಡುವುದು)

ಇ) ಈ ಯೋಜನೆಯಡಿ ಆರಂಭದಿಂದ ಪ್ರತಿ ಸಾಲಿನಲ್ಲಿ ತಾಲ್ಲೂಕುವಾರು ಬಿಡುಗಡೆ ಮಾಡಿದ ಹಣವೆಷ್ಟು; ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಶಾಲಾವಾರು ಬಿಡುಗಡೆಯಾದ ಹಣ ಎಷ್ಟು?